ಓ.ಎಸ್. ನಂ. 02/2021

ಪಿ.ಡಬ್ಲ್ಯು: 01 (Yashodamma)

ದಿನಾಂಕಃ 11.02.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ – ಶ್ರೀ BSP ವಕೀಲರಿಂದ.

ನನ್ನ ಗಂಡ 25 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ಗಂಡನಿಗೆ 4 ಜನ ಒಡಹುಟ್ಟಿದವರು, ಅವರುಗಳು ದೊಡ್ಡಬಾಲಪ್ಪ, ಕುಂಟದೊಡ್ಡಪ್ಪ, ಬಾಲಮ್ಮ, ದೊಡ್ಡಮ್ಮ ಇರುತ್ತಾರೆ. ದೊಡ್ಡನಹಳ್ಳಿ ಈರಪ್ಪ ನನ್ನ ಗಂಡನ ತಂದೆ. ನನ್ನ ಗಂಡನ ತಾಯಿಯ ಹೆಸರು ಕರಡಮ್ಮ. ನನ್ನ ಮದುವೆಗೆ ಮೊದಲೇ ದೊಡ್ಡನಹಳ್ಳಿ ಈರಪ್ಪರವರು ಮೃತಪಟ್ಟಿರುತ್ತಾರೆ. ಕರಡಮ್ಮ ಅಂದಾಜು 20-22 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ದೊಡ್ಡನಹಳ್ಳಿ ಈರಪ್ಪರವರಿಗೆ ಕರಡಮ್ಮ 2 ನೇ ಹೆಂಡತಿ ಎಂದರೆ ಹೌದು. ಮೊದಲನೇಯ ಹೆಂಡತಿಯ ಹೆಸರು ದ್ಯಾಮಜ್ಜಿ ಎಂದರೆ ಹೌದು. ದ್ಯಾಮಜ್ಜಿಗೆ ದೊಡ್ಡಬಾಲಮ್ಮ ಮತ್ತು ಚಿತ್ತಪ್ಪ ಎಂಬ 2 ಮಕ್ಕಳು ಎಂದರೆ ಚಿತ್ತಪ್ಪ ಬಗ್ಗೆ ನನಗೆ ಗೊತ್ತಿಲ್ಲ, ದೊಡ್ಡಬಾಲಮ್ಮಳ ಬಗ್ಗೆ ಗೊತ್ತು. ಅವರೆಲ್ಲ ಈಗ ಮೃತಪಟ್ಟಿರುತ್ತಾರೆ.

ನನ್ನ ಮದುವೆಯ ಕಾಲಕ್ಕೆ ದೊಡ್ಡಬಾಲಮ್ಮ ಜೀವಂತ ಇದ್ದಳು ಎಂದರೆ ಹೌದು. ಅವಳಿಗೆ ಮದುವೆ ಸಹ ಆಗಿತ್ತು ಎಂದರೆ ಹೌದು. ಅವರಿಗೆ ಮಕ್ಕಳು ಇದ್ದರು ಎಂದರೆ ಇಲ್ಲ. ಮೇಲೆ ಹೇಳಿದ ಎಲ್ಲ ಅಂಶಗಳನ್ನು ವಾದಪತ್ರದಲ್ಲಿ ತಿಳಿಸಿರುವುದಿಲ್ಲ. ದಾವಾ ಸ್ವತ್ತುಗಳ ಸರ್ವೆ ನಂಬರ್ ನನಗೆ ಹೇಳಲಾಗುವುದಿಲ್ಲ. ನನ್ನ ಮಾವನ ಹೆಸರಿಗೆ ಇರುವ ಆಸ್ತಿಗಳ ಸರ್ವೆ ನಂಬರುಗಳನ್ನು ಹೇಳಲಾಗುವುದಿಲ್ಲ. ಸಾಕ್ಷಿ ಮುಂದುವರೆದು 16 ಎಕರೆ ಇದ್ದು 8 ಎಕರೆ ನಮ್ಮ ಮಾವನ ಭಾಗಕ್ಕೆ ಬಂದಿದೆ. ಮಾವನ ಭಾಗಕ್ಕೆ ಬಂದ ಆಸ್ತಿಯ ಪೂರ್ವಕ್ಕೆ ಎರಿಗೋಡಜ್ಜ ಅವರ ಹೊಲ, ಪಶ್ಚಿಮಕ್ಕೆ ಮಲ್ಲಜ್ಜಿಯ ಹಟ್ಟಿ, ಉತ್ತರಕ್ಕೆ ಪೂಜಾರಿ ಬಾಲಪ್ಪ, ದಕ್ಷಿಣಕ್ಕೆ ಮಲ್ಲಜ್ಜಿಯ ಹಟ್ಟಿ ಇರುತ್ತದೆ. ಸದರಿ ಚೆಕ್‌ಬಂದಿಯನ್ನು ವಾದಪತ್ರದಲ್ಲಿ ಹೇಳಿ ಬರೆಸಿರುತ್ತೇನೆ.

ನಾನು ಹಾಜರುಪಡಿಸಿರುವ ದಾಖಲಾತಿಗಳಲ್ಲಿ 16 ಎಕರೆ 87 ಸೆಂಟ್ಸ ಗೊಲ್ಲರ ದೊಡ್ಡ ಬಾಲಪ್ಪ, ಹಳ್ಳಿ ಬಾಲಪ್ಪ ತಂದೆ ಬಾಲಪ್ಪ ಮೂಡ್ಲಕನಹಳ್ಳಿರವರ ಹೆಸರಿಗೆ ಜಂಟಿ ಇದೆ ಎಂದರೆ ಅದರಲ್ಲಿ ನಮ್ಮ ಮಾವನಿಗೆ ಅರ್ಧ ಭಾಗ ಇದೆ. ನಿಪಿ 1 ರಲ್ಲಿ ಕಂಡು ಬರುತ್ತಿರುವ ಮತ್ತೊಬ್ಬರ ಹೆಸರು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅವರು ನನ್ನ ಮಾವನ ತಂದೆ. ಅವರು ಈಗ ಜೀವಂತ ಇಲ್ಲ ಎಂದರೆ ಹೌದು. ನನ್ನ ಮಾವನ ಹೆಸರು ಈರಪ್ಪ, ಅವರ ತಂದೆಯ ಹೆಸರು ದೊಡ್ಡಬಾಲಪ್ಪ. ಹಳ್ಳಿ ಬಾಲಪ್ಪ ತಂದೆ ಬಾಲಪ್ಪ ಅವರು ನನ್ನ ಮಾವನ ತಂದೆಯಾದ ದೊಡ್ಡಬಾಲಪ್ಪರವರ ಸಂಬಂಧಿಕರು. ಹಳ್ಳಿ ಬಾಲಪ್ಪ ತಂದೆ ಬಾಲಪ್ಪ ಅವರ ವಾರಸುದಾರರು ಜೀವಂತ ಇದ್ದಾರಾ ಎಂದು ನನಗೆ ಗೊತ್ತಿಲ್ಲ. ನನ್ನ ಮಾವನಿಗೆ ಐಟಂ ನಂಬರ್ 1 ರಲ್ಲಿ ಅರ್ಧ ಭಾಗ ಇದೆ ಎಂದು ಹೇಳುತ್ತಿರುವುದು

ಓ.ಎಸ್. ನಂ. 02/2021

ಪಿ.ಡಬ್ಲ್ಯೂ: 01 (Yashodamma)

ಸುಳ್ಳು ಎಂದರೆ ಸರಿಯಲ್ಲ. ಯಾವ ಆಧಾರದ ಮೇರೆಗೆ ನನ್ನ ಮಾವನಿಗೆ ಐಟಂ ನಂಬರ್ 1 ರಲ್ಲಿ ಅರ್ಧ ಭಾಗ ಇದೆ ಎಂದು ಹೇಳುತ್ತಿರುವುದು ಎಂದರೆ ಅವರು ಉಳುಮೆ ಮಾಡುತ್ತಿದ್ದ ಕಾರಣ ಹೇಳುತ್ತಿದ್ದೇನೆ. ಐಟಂ ನಂಬರ್ 1 ರಲ್ಲಿ ಇನ್ನುಳಿದ ಅರ್ಧ ಭಾಗವನ್ನು ಯಾರು ಮಾಡುತ್ತಿದ್ದಾರೆ ಎಂದರೆ ನನ್ನ ಮಾವನೇ ಮಾಡುತ್ತಿದ್ದಾರೆ. ಇನ್ನುಳಿದ 2 ಸರ್ವೆ ನಂಬರುಗಳು ಸೇರಿ ಒಟ್ಟು 14 ಎಕರೆ ಇದೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.